ಆರ್‌ಬಿಐ / 2005–06 / 174
ಡಿಜಿಬಿಎ. ಜಿಎಡಿ .ಸಂಖ್ಯೆ .ಹೆಚ್. 3095 / 41.07.001 / 2005–06
ಅಕ್ಟೋಬರ್ 06, 2005

ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು / ವ್ಯವಸ್ಥಾಪಕ ನಿರ್ದೇಶಕರು
ಎಲ್ಲಾ ಏಜೆನ್ಸಿ ಬ್ಯಾಂಕುಗಳು

ಮಾನ್ಯರೇ,

**ಸರ್ಕಾರದ ಕಾರ್ಯಕಲಾಪಗಳ ನಿರ್ವಹಣೆ – ತೆರಿಗೆ ಪಾವತಿದಾರರಿಗೆ ವಿದ್ಯುನ್ಮಾನ ವ್ಯವಸ್ಥೆ ಮೂಲಕ ಸಂದಾಯದ ಸೌಲಭ್ಯ ಒದಗಿಸುವುದು – ಅಂತರ್‌ಜಾಲ ಬ್ಯಾಂಕಿಂಗ್‌ನ ಮಾರ್ಗಸೂಚಿಗಳು**

ಸರ್ಕಾರದ ಇಲಾಖೆಗಳ ಪರವಾಗಿ ತೆರಿಗೆಗಳನ್ನು ಸಂಗ್ರಹಿಸುವುದಕ್ಕಾಗಿ ವಿದ್ಯುನ್ಮಾನ ವ್ಯವಸ್ಥೆ ಮೂಲಕ ಸಂದಾಯ ವ್ಯವಸ್ಥೆಯನ್ನು ಪ್ರಾರಂಭಿಸಲು ನಮ್ಮ ಅನುಮತಿಯನ್ನು ಕೋರಿ ಏಜೆನ್ಸಿ ಬ್ಯಾಂಕುಗಳಿಂದ ನಮಗೆ ಮನವಿಗಳು ಬರುತ್ತಿವೆ.

2. ಈ ಸಂಬಂಧದಲ್ಲಿ, ವಿದ್ಯುನ್ಮಾನ ವ್ಯವಸ್ಥೆ ಮೂಲಕ ಸಂದಾಯ ವಿಧಾನದಲ್ಲಿ ಗ್ರಾಹಕರಿಗೆ ದೊರೆಯುತ್ತಿರುವ ಪ್ರಯೋಜನವನ್ನು ಸರ್ಕಾರಕ್ಕೆ ಮತ್ತು ಅದರ ಗ್ರಾಹಕರಿಗೂ ವಿಸ್ತರಿಸಬೇಕೆಂದು ನಾವು ಆಶಿಸುತ್ತೇವೆ. ಅಲ್ಲದೆ ಈ ಸಂಬಂಧದಲ್ಲಿ ದಿನಾಂಕ ಜುಲೈ 20,2005 ರ ಸುತ್ತೋಲೆ ಆರ್‌ಬಿಐ / 005–06 / 71 ರ ಮೂಲಕ ನಮ್ಮ ಬ್ಯಾಂಕಿಂಗ್ ವ್ಯವಹಾರಗಳು ಮತ್ತು ಅಭಿವೃದ್ಧಿ ಇಲಾಖೆಯು (ಡಿಬಿಓಡಿ) ಹೊರಡಿಸಿರುವ ಮಾರ್ಗ ಸೂಚಿಗಳನ್ನು ನಾವು ನಿಮ್ಮ ಗಮನಕ್ಕೆ ತರಬಯಸುತ್ತೇವೆ. (ನಮ್ಮ ವೆಬ್ ಸೈಟ್ www.rbi.org.in ರಲ್ಲಿ ಲಭ್ಯವಿದೆ)

3. ಮೇಲೆ ಕಾಣಿಸಿದ ಕಾರಣದಿಂದ, ಆಯಾಯ ಪ್ರಕರಣದ ಆಧಾರದ ಮೇಲೆ ಸಚಿವಾಲಯಗಳ / ಇಲಾಖೆಗಳ ಪರವಾಗಿ ವಿದ್ಯುನ್ಮಾನ ವ್ಯವಸ್ಥೆ ಮೂಲಕ ಸಂದಾಯ ಸೌಲಭ್ಯಗಳನ್ನು ವಿನ್ಯಾಸಗೊಳಿಸುವುದಕ್ಕಾಗಿ ನಮ್ಮ ಪೂರ್ವಾನುಮೋದನೆಯನ್ನು ಕೋರುವ ಅಗತ್ಯವಿಲ್ಲ ಎಂದು ನಾವು ತಿಳಿಸಬಯಸುತ್ತೇವೆ. ಆದರೂ, ನೀವು ಮೇಲೆ ಉಲ್ಲೇಖಿಸಿದ ದಿನಾಂಕ ಜುಲೈ 20,2005 ರ ಡಿಬಿಓಡಿ ಸುತ್ತೋಲೆಯ ಮಾರ್ಗದರ್ಶನ ಪಡೆಯಬಹುದಾಗಿದೆ.

4. ದಯವಿಟ್ಟು ಸ್ವೀಕೃತಿ ನೀಡಿ.

**ತಮ್ಮ ವಿಶ್ವಾಸಿ,**
**(ಗಿರೀಶ್ ಕಲ್ಯಾಣ್ಪುರ್)**
**ಉಪ ಪ್ರಧಾನ ವ್ಯವಸ್ಥಾಪಕರು**